


ಚೀನಾದ ಹಾಂಗ್‌ಝೌನಲ್ಲಿ ನಡೆದಿದ್ದ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ ಭಾರತ ಮಹಿಳಾ ಕ್ರಿಕೆಟ್ ತಂಡ

# ಚಕ್ ದೇ ಇಂಡಿಯಾ...

**ನವದುರ್ಗೆಯರನ್ನು ಪೂಜಿಸುವ ನವರಾತ್ರಿ ಹಬ್ಬದ ಸಂದರ್ಭದಲ್ಲಿಯೇ ಮಹಿಳೆಯರ ಕ್ರಿಕೆಟ್ ವಿಶ್ವಕಪ್ ಸಡಗರ ಗರಿಗೆದರಿದೆ. ಪುರುಷ ಪ್ರಾಬಲ್ಯದ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸುವಲ್ಲಿ ಭಾರತದ ಮಹಿಳಾ ಕ್ರಿಕೆಟಿಗರೂ ಹಿಂದೆ ಬಿದ್ದಿಲ್ಲ. ಈ ನಿಟ್ಟಿನಲ್ಲಿ ವಿಶ್ವಕಪ್ ವಿಜಯವೊಂದು ಬಾಕಿ ಇದೆ. ಹಲವು ವರ್ಷಗಳ ಆ ಕನಸು ಈಗ ಕೈಗೂಡುವುದೇ ಎಂಬ ಕುತೂಹಲ ಮೂಡಿದೆ.**

■ **ಗಿರೀಶ ದೊಡ್ಡಮನಿ**

## ಮಹಿಳಾ ವಿಶ್ವಕಪ್ ಕ್ರಿಕೆಟ್ ಹಬ್ಬ

ಆದಿವಾಸಿ ಜನಬಾಹುಳ್ಯ ಇರುವ ಮಧ್ಯಪ್ರದೇಶದ ಗುವಾರಾ ಗ್ರಾಮ ಮುನ್ನಾಸಿಂಗ್ ಅವರ ಕುಟುಂಬದ ಕುಡಿ ಕ್ರಾಂತಿ ಗೌಡ್. ಮೂವರು ಅಣ್ಣಂದಿರು ಮತ್ತು ಇಬ್ಬರು ಅಕ್ಕಂದಿರ ಅಚ್ಚೆಯಲ್ಲಿ ಬೆಳೆದ ಹುಡುಗಿ. ಆದರೆ ಅವರೆಲ್ಲರಿಗಿಂತ ಭಿನ್ನವಾದ ಕ್ರಾಂತಿಯನ್ನೇ ಮಾಡಿದರು. ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಸಮಾಜದಲ್ಲಿ ಸಿಗದ ಸಮ್ಮಾನ ಮತ್ತು ದುಃಖ ದುಮ್ಮಾನಗಳನ್ನೆಲ್ಲ ಮೀರಿ ನಿಂತ ಕ್ರಾಂತಿ ಈಗ ಭಾರತ ಮಹಿಳಾ ಕ್ರಿಕೆಟ್ ತಂಡದ ವೇಗದ ಬೌಲರ್. 21 ವರ್ಷದ ಕ್ರಾಂತಿ ಏಕದಿನ ಕ್ರಿಕೆಟ್ ವಿಶ್ವಕಪ್ ಆಡಲು ಸಿದ್ಧರಾಗಿದ್ದಾರೆ. ತಮ್ಮ ಹಳ್ಳಿಯಲ್ಲಿ ಹುಡುಗರೊಂದಿಗೆ ಟೆನಿಸ್ ಬಾಲ್ ಕ್ರಿಕೆಟ್ ಆಡುತ್ತಲೇ ಬೆಳೆದರು. ಬಾಯ್ ಕಟ್ ಕೂದಲು, ತೆಳು ಮೈಕಟ್ಟು ಮತ್ತು ಛಲಭರಿತ

